## 1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ. ರವರ ನ್ಯಾಯಾಲಯ, ಟಿ.ನರಸೀಪುರ

## ಸಿ.ಸಿ ಸಂಖ್ಯೆ: 584/2023

**ಫಿರ್ಯಾದಿದಾರರು** : ಅಬಕಾರಿ ಪೋಲೀಸರು

**ವಿರುದ್ಧ**

**ಆರೋಪಿ** : ಮನು ಮತ್ತು ಬಾಲು

## ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರನ್ವಯ ಆರೋಪಿಯ ಹೇಳಿಕೆ

ಪ್ರಶ್ನೆ:1: ಈ ಮೊಕದ್ದಮೆಯಲ್ಲಿ ವಿಚಾರಣೆ ಆಗಿರುವ ಸಾಕ್ಷಿದಾರರ ಹೇಳಿಕೆಯನ್ನು ಕೇಳಿಸಿಕೊಂಡಿದ್ದೀರಾ?

**ಉಃ**

ಪ್ರಶ್ನೆ:**2**: ಫ್ರಾಸಾ-3 ಮತ್ತು 4 ರವರು ತಮ್ಮ ಸಾಕ್ಷ್ಯದಲ್ಲಿ, ದಿಃ 14.03.2021 ರಂದು ಬೆಳಿಗ್ಗೆ 09.00 ಗಂಟೆಯಿಂದ ಇಲಾಖಾ ವಾಹನದಲ್ಲಿ ಸಿಬ್ಬಂದಿಗಳಾ ಚಾ,ಸಾ. 3 ಮತ್ತು 4 ರವರೊಂದಿಗೆ ಟಿ.ನರಸೀಪುರ, ಕೊಳ್ಳೆಗಾಲ ಮುಖ್ಯ ರಸ್ತೆಯ ವಾಟಾಲು ಗ್ರಾಮಕ್ಕೆ ಹೋಗುವ ಕೂಡು ರಸ್ತೆಯಲ್ಲಿ ರಸ್ತೆಗಾವಲು ನಡೆಸುತ್ತಿರುವಾಗ ಬೆಳಿಗ್ಗೆ 09.20 ರ ಸಮಯದಲ್ಲಿ ಬರುತ್ತಿದ್ದ ಒಂದು ಬಿಳಿ ಬಣ್ಣದ ಮಹೀಂದ್ರ ಮ್ಯಾಕ್ಸಿಮೋ ವಾಹನವನ್ನು ತಡೆದು ನಿಲ್ಲಿಸಿ ನೋಡಿದಾಗ, ಸದರಿ ವಾಹನದಲ್ಲಿ ಇದ್ದ ವಾಹನದ ಚಾಲಕ ತಮ್ಮನ್ನು ನೋಡಿ ಗಾಬರಿಗೊಂಡಂತೆ ಕಂಡನು. ಸದರಿ ವಾಹನವನ್ನು ಪರಿಶೀಲನೆ ಮಾಡಿದಾಗ ವಾಹನದ ಸಂಖ್ಯೆ ಕೆ ಎ 45-ಎಂ-2426 ಬಿಳಿ ಬಣ್ಣದ ಮಹೀಂದ್ರ ಮ್ಯಾಕ್ಸಿಮೋ ವಾಹನವಾಗಿದ್ದು, ವಾಹನದ ಸೀಟು ಬಳಿ ಮೂರು ರಟ್ಟಿನ ಪೆಟ್ಟಿಗೆಗಳು ಇರುವುದು ಕಂಡು ಬಂದಿರುತ್ತದೆ ಎಂದು ಹೇಳಿದ್ದಾರೆ. ಈ ಬಗ್ಗೆ ನಿಮಗೆ ಏನಾದರೂ ಹೇಳುವುದಿದೆಯೆ?

**ಉಃ**

ಪ್ರಶ್ನೆ:**3**: ಫ್ರಾಸಾ- **3** ಮತ್ತು **4** ರವರು ಮುಂದುವರೆದು ಸಾಕ್ಷಿ ನುಡಿಯುತ್ತಾ ಆರೋಪಿ ಹೆಸರು ಮತ್ತು ವಿಳಾಸ ಕೇಳಲಾಗಿ ಮನು, ಬಿನ್ ಮಹದೇವಯ್ಯ, ಯಾಕನೂರು ಗ್ರಾಮ ಎಂದು ತಿಳಿಸಿದ್ದು, ಆರೋಪಿಯನ್ನು ಸದರಿ ಮಧ್ಯವನ್ನು ಹೊಂದಲು ಮತ್ತು ಸಾಗಾಣಿಕೆ ಮಾಡಲು ಪರವಾನಗೆ ಇದೆಯೇ

ಎಂದು ವಿಚಾರಿಸಲಾಗಿ, ಆತ ಸಮಂಜಸವಾದ ಉತ್ತರವನ್ನು ನೀಡಿರುವುದಿಲ್ಲ ಎಂದು ಹೇಳಿದ್ದಾರೆ. ಈ ಬಗ್ಗೆ ನಿಮಗೆ ಏನಾದರೂ ಹೇಳುವುದಿದೆಯೆ?

**ಉಃ**

**ಪ್ರಶ್ನೆ:4**: ಫ್ರಾಸಾ– **3** ಮತ್ತು **4** ರವರು ಮುಂದುವರೆದು ಸಾಕ್ಷಿ ನುಡಿಯುತ್ತಾ, ಆರೋಪಿಯ ಬಳಿ ಇದ್ದ ರಟ್ಟಿನ ಬಾಕ್ಸ್ ಗಳನ್ನು ಶೋದನೆ ಮಾಡಲು ಸ್ಥಳದಲ್ಲಿ ಹೋಗುತ್ತಿದ್ದ ಇಬ್ಬರು ವ್ಯಕ್ತಿಗಳಾದ ಚಾ,ಸಾ. 1 ಮತ್ತು 2 ರವರಿಗೆ ಪಂಚರಾಗಲು ನೋಟೀಸನ್ನು ನೀಡಿ ಅವರ ಒಪ್ಪಿಗೆಯನ್ನು ಪಡೆದು ಶೋದನಾ ಸಮುಚಿತ ಆಧಾರವನ್ನು ನ್ಯಾಯಾಲಯದಿಂದ ಪಡೆಯಲು ಸಮಯಾವಕಾಶ ಇಲ್ಲದೇ ಇರುವುದರಿಂದ ತಾವುಗಳೇ ಶೋದನಾ ವಾರೆಂಟ್ ನ್ನು ಸ್ಥಳದಲ್ಲೇ ತಯಾರಿಸಿ ರಟ್ಟಿನ ಬಾಕ್ಸ್ ಗಳನ್ನು ತೆಗೆದು ನೋಡಿದಾಗ ಎರಡು ರಟ್ಟಿನ ಬಾಕ್ಸ್ ಗಳ ಮೇಲೆ ರಾಯಲ್ ಚಾಲೆಂಜ್ ಸ್ಟಾಂಗ್ ಬಿಯರ್ 650 ಮಿಲಿಯ 24 ಬಾಟಲುಗಳು ಕಂಡು ಬಂದಿರುತ್ತದೆ. ಮತ್ತೊಂದು ರಟ್ಟಿನ ಪೆಟ್ಟಿಗೆಯಲ್ಲಿ 500 ಮಿಲಿಯ 24 ಪವರ್ಫುಲ್ ಸ್ಟಾಂಗ್ ಬಿಯರ್ ಕ್ಯಾನ್ ಗಳು ಕಂಡು ಬಂದಿರುತ್ತದೆ ಎಂದು ಹೇಳಿದ್ದಾರೆ. ಈ ಬಗ್ಗೆ ನಿಮಗೆ ಏನಾದರೂ ಹೇಳುವುದಿದೆಯೆ?

**ಉಃ**

**ಪ್ರಶ್ನೆ:5**: ಫ್ರಾಸಾ–**3** ಮತ್ತು **4** ರವರು ಮುಂದುವರೆದು ಸಾಕ್ಷಿ ನುಡಿಯುತ್ತಾ, ನಂತರ ದೊರೆತ ಬಿಯರ್ ನಲ್ಲಿ ಒಂದು ರಟ್ಟಿನ ಬಾಕ್ಸ್ ನಲ್ಲಿದ್ದ 650 ಮಿಲಿಯ 12 ರಾಯಲ್ ಚಾಲೆಂಚ್ ಸ್ಟಾಂಗ್ ಬಿಯರ್ ಗಳು ಹಾಗೂ ಮತ್ತೂಂದು ಪಟ್ಟಿಗೆಯ 500 ಮಿಲಿಯ ಪವರ್ಫುಲ್ ಸ್ಟಾಂಗ್ ಬಿಯರ್ ಕ್ಯಾನ್ ಗಳನ್ನು ದೊರೆತ ಪಟೆಟೆಯಲ್ಲೇ ಹಾಕಿ ರಾಸಾಯನಿಕ ಪರೀಕ್ಷೆಗಾಗಿ ಮಾದರಿಯನ್ನು ತೆಗೆದು ಪ್ರತ್ಯೇಕವಾಗಿ  ಬಿಳಿ ಬಟ್ಟೆಯಿಂದ ಸುತ್ತಿ, ಇಲಾಖಾ ಸೀಲು 278 ಎಂದು ಸೀಲು ಮಾಡಿ, ಮಾದರಿ ಚೀಟಿಗಳನ್ನು ಅಂಟಿಸಿ, ನಂತರ ಪಂಚನಾಮೆಯನ್ನು ಜರುಗಿಸಿ ದೂರೆತ ಮಧ್ಯವನ್ನು ಅಮಾನತ್ತು ಪಡಿಸಿಕೊಂಡು,  ಠಾಣೆಗೆ ಹೋಗಿ ಆರೋಪಿಗಳ ವಿರುದ್ಧ ಮೊಕದ್ದಮೆ ದಾಖಲಿಸಿ, ನಂತರ ಆರೋಪಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿ, ಈ ಸಂಬಂಧ ವರದಿ ಸಲ್ಲಿಸಿ, ನಂತರ ಈ ಪ್ರಕರಣದ ಕಡತವನ್ನು ಚಾ.ಸಾ. 8 ರವರಿಗೆ ಹಸ್ತಾಂತರಿಸಿರುವುದಾಗಿ ಹೇಳಿದ್ದಾರೆ. ಈ ಬಗ್ಗೆ ನಿಮಗೆ ಏನಾದರೂ ಹೇಳುವುದಿದೆಯೆ?

**ಉಃ**

**ಪ್ರಶ್ನೆ:6**: **ಫ್ರಾಸಾ–5** ರವರು ಸಾಕ್ಷಿ ನುಡಿಯುತ್ತಾ, ದಿಃ 20.03.2023 ರಂದು ಚಾ.ಸಾ.7 ರವರಿಂದ ಈ ಪ್ರಕರಣ ಕಡತವನ್ನು ಸ್ವೀಕರಿಸಿ, ದಿಃ 21.03.2023 ರಂದು ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ಪೂರ್ವ ವಿಭಾಗ, ಮೈಸೂರು ಇವರಿಂದ ಬಿ.ವೈ. ವರದಿಯನ್ನು ಪಡೆದಿರುತ್ತೇನೆ. ದಿಃ 20.05.2023 ರಂದು ಮಹಜರ್ ಸಾಕ್ಷಿದಾರರಾದ ಚಾಸಾ.2 ರಿಂದ 5 ರವರ ಹೇಳಿಕೆಯನ್ನು ಪಡೆದುಕೊಂಡು, ದಿಃ 21.05.2023 ರಂದು ವಾಹನ ಮಾಲಿಕರಿಗೆ ನೋಟಿಸನ್ನು ಜಾರಿ ಮಾಡಿ, ನಂತರ ದಿಃ 20.07.2023 ರಂದು ರಾಸಾಯನಿಕ ವರದಿಯನ್ನು ಚಾ.ಸಾ.4 ರವರಿಂದ ಪಡೆದುಕೊಂಡು, ನಂತರ ತನಿಖೆಯನ್ನು ಪೂರ್ಣಗೊಳಿಸಿ ಆರೋಪಿಗಳ ವಿರುದ್ಧ ಆರೋಪ ಸಾಬೀತಾದ್ದರಿಂದ ಅಂತಿಮ ವರದಿಯನ್ನು ಸಲ್ಲಿಸಿರುವುದಾಗಿ ಹೇಳಿದ್ದಾರೆ. ಈ ಬಗ್ಗೆ ನಿಮಗೆ ಏನಾದರೂ ಹೇಳುವುದಿದೆಯೆ?

**ಉಃ**

**ಪ್ರಶ್ನೆ: 7** : ನೀವು ಈ ಪ್ರಕರಣದಲ್ಲಿ ಏನಾದರೂ ಹೇಳುವುದಿದೆಯೇ ?

**ಉಃ**

**ಪ್ರಶ್ನೆ: 8** : ನೀವು ನಿಮ್ಮ ಪರವಾದ ಯಾವುದಾದರೂ ಸಾಕ್ಷ್ಯವನ್ನು ಮತ್ತು ದಾಖಲೆಗಳನ್ನು ಹಾಜರುಪಡಿಸುತ್ತೀರಾ?

**ಉತ್ತರಃ**

ನನ್ನ ಸಮಕ್ಷಮದಲ್ಲಿ ಆರೋಪಿತನ ವಿಚಾರಣೆಯನ್ನು ನಡೆಸಿದ್ದು, ಆರೋಪಿತನು ನೀಡಿದ ಉತ್ತರವನ್ನು ಯಥಾವತ್ತಾಗಿ ಮತ್ತು ಸಂಪೂರ್ಣವಾಗಿ ದಾಖಲು ಮಾಡಿಕೊಂಡಿದ್ದೇನೆಂದು ಈ ಮೂಲಕ ದೃಢಪಡಿಸುತ್ತೇನೆ.

ದಿನಾಂಕಃ 07/03/2026 ರಂದು ತೆರೆದ ನ್ಯಾಯಾಲಯದಲ್ಲಿ ಆರೋಪಿತನ ಹೇಳಿಕೆಯನ್ನು ದಾಖಲಿಸಿಕೊಳ್ಳಲಾಯಿತು.

**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು**

**ಮತ್ತು ಪ್ರದನ್ಯಾದಂ., ಟಿ.ನರಸೀಪುರ.**